# ಟ್ರೋಲ್ ದಾಟುವ ಸಾರಾ ವಿಧಾನ...

ರಚನಾತ್ಮಕ ವಿಮರ್ಶೆಗೂ ವೈಯಕ್ತಿಕ ಟೀಕೆಗೂ ವ್ಯತ್ಯಾಸ ಇದೆ ಎನ್ನುವುದು ನಟಿ ಸಾರಾ ಅಲಿ ಖಾನ್ ಅವರಿಗೆ ಅರಿವಾಗಿದ್ದು ತುಸು ತಡವಾಗಿ. 2018ರಲ್ಲಿ ‘ಕೇದಾರನಾಥ್’ ಹಿಂದಿ ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ ಅವರಿಗೆ ಮೊದಮೊದಲು ಸಾಮಾಜಿಕ ಮಾಧ್ಯಮದ ಟ್ರೋಲ್ ಕಂಗೆಡಿಸಿತ್ತು. ಕ್ರಮೇಣ ತಮಗೆ ತಾವೇ ಒಂದು ಫಿಲ್ಟರ್ ಹಾಕಿಕೊಳ್ಳುವುದನ್ನು ಅಭ್ಯಾಸ ಮಾಡಿಕೊಂಡರು.

‘ಅಭಿನಯ ಆರಿಸಿಕೊಂಡ ಮೇಲೆ ಸಾರ್ವಜನಿಕ ಜೀವನಕ್ಕೆ ಧುಮುಕಿದಂತೆಯೇ ಸರಿ. ಆಗ ಎಲ್ಲ ದಿಕ್ಕುಗಳಿಂದಲೂ ಅಭಿಪ್ರಾಯಗಳು ನುಗ್ಗಿಬರುತ್ತವೆ. ಕೆಲವು ನಿಜಕ್ಕೂ ಅರ್ಥಪೂರ್ಣವಾಗಿ ಇರುತ್ತವೆ. ಕಲಿಯಲು, ತಿದ್ದಿಕೊಳ್ಳಲು ಪ್ರೇರಣೆ ಕೊಡುತ್ತವೆ. ಇನ್ನು ಕೆಲವು ಅಭಿಪ್ರಾಯಗಳು ಕುಚೇಷ್ಟೆಯ ಪರಮಾವಧಿಯಾದ್ದಾಗಿರುತ್ತವೆ. ನಾನು ಯಾವುದನ್ನು ಲಕ್ಷ್ಯ ಕೊಟ್ಟು ಓದಬೇಕು, ಯಾವುದನ್ನು ಡಿಲೀಟ್ ಮಾಡಿ ಮುಂದೆ ಸಾಗಬೇಕು ಎಂದು ಸ್ಪಷ್ಟವಾಗಿ ನಿರ್ಧರಿಸಿದೆ. ನಾನು ಮೇಲೇರಲು ಕಾರಣವಾಗಬಲ್ಲ ಉದ್ದೇಶ ಇರುವ ವಿಮರ್ಶೆಯನ್ನು ಒಪ್ಪಿಕೊಳ್ಳಲು ಅಡ್ಡಿ ಇಲ್ಲ. ತುಳಿಯುವುದೇ ಗುರಿ ಎನ್ನುವಂತಹ ಮೆಸೇಜ್‌ಗಳನ್ನು ದಾಟಿ ಮುನ್ನಡೆಯುವುದನ್ನು ಅಭ್ಯಾಸ ಮಾಡಿಕೊಂಡೆ’ ಎನ್ನುತ್ತಾರೆ ಸಾರಾ.

ತಮ್ಮ ಮಾನಸಿಕ ಶಾಂತಿ ಕಾಪಾಡಿಕೊಳ್ಳಲು ಸಾರಾ ಆಗಾಗ ‘ಮಿನಿ ಡ್ರಾಮಾ ಮೊಮೆಂಟ್’ ಸೃಷ್ಟಿಸಿಕೊಳ್ಳುತ್ತಾರೆ. ಇಷ್ಟದ ಸರಣಿ ನೋಡುವುದು, ಸುಖಾಸುಮ್ಮನೆ ನಗುವುದು ಅಥವಾ ಅತ್ತು ಹಗುರಾಗುವುದು... ಇವೆಲ್ಲವೂ ಆ ‘ಮೊಮೆಂಟ್’ ಆಗಬಹುದು. ಹೀಗೆ ಮಾಡಿದಾಗ ತಾವು ಹಗುರಾಗಿ, ಮತ್ತೆ ಕೆಲಸದತ್ತ ಚಿತ್ತ ಹರಿಸಲು ಸಾಧ್ಯ ಎನ್ನುವುದನ್ನು ಕಂಡುಕೊಂಡಿದ್ದಾರೆ. ■






## ಬೇಕು ಸಿನಿಮಾ ಶಿಸ್ತು...

# ರಶ್ಮಿಕಾ ಸುಸ್ತು

‘ಸ್ಪಿರಿಟ್’, ‘ಕಲ್ಕಿ 2898 ಎ.ಡಿ. ಭಾಗ 2’ ಎರಡೂ ಚಿತ್ರಗಳಿಂದ ದೀಪಿಕಾ ಪಡುಕೋಣೆ ಹೊರಬಂದ ಸುದ್ದಿಯು ತಣ್ಣಗಾಗುತ್ತಿದೆ ಎನ್ನುವಾಗಲೇ, ಮತ್ತೆ ಅದು ಚಾಲ್ತಿಗೆ ಬಂದಿದೆ. ಹಾಗೆ ಚಾಲ್ತಿಗೆ ತಂದಿರುವವರು ರಶ್ಮಿಕಾ ಮಂದಣ್ಣ. ‘ದಿ ಗರ್ಲ್‌ಫ್ರೆಂಡ್’ ತೆಲುಗು ಚಿತ್ರದಲ್ಲಿ ರಶ್ಮಿಕಾ ನಾಯಕಿಯಾಗಿ ಅಭಿನಯಿಸಿದ್ದು, ಅದು ನವೆಂಬರ್ 5ರಂದು ತೆರೆ ಕಂಡಿದೆ. ಆ ಚಿತ್ರದ ನಿರ್ಮಾಪಕ ಶ್ರೀನಿವಾಸ ಕುಮಾರ್ ಅವರು ಮುಕ್ತಕಂಠದಿಂದ ರಶ್ಮಿಕಾ ಅವರನ್ನು ಹೊಗಳಿದರು. ಅವರ ಹೊಗಳಿಕೆ ಕೇಂದ್ರವಾಗಿದ್ದುದು– ಈ ನಟಿಯು ಇಷ್ಟೇ ಹೊತ್ತಿಗೆ ಪ್ಯಾಕಪ್ ಆಗಬೇಕು ಇಷ್ಟು ಹೊತ್ತಿಗೆ ಮೊದಲು ಚಿತ್ರೀಕರಣಕ್ಕೆ ಬರಲಾಗದು ಎಂದೆಲ್ಲ ಷರತ್ತುಗಳನ್ನು ಹಾಕೋಲ್ಲ ಎಂಬ ಅಂಶದ ಮೇಲೆ. ಹೀಗೆ ನಟಿಯು ಮುಕ್ತವಾಗಿ ಕೆಲಸ ಮಾಡಲು ಸಿದ್ಧ ಇರಬೇಕು ಎಂದು ಶ್ರೀನಿವಾಸ್ ಕೊಂಡಾಡಿದರು.

ಅದಾಗಿ ಕೆಲವೇ ದಿನಗಳ ನಂತರ ರಶ್ಮಿಕಾ ಸಂದರ್ಶನವೊಂದರಲ್ಲಿ ತಮ್ಮ ಆತ್ಮಕಥೆಯ ಪುಟವೊಂದನ್ನು ಹರಡುವಂತೆ ಮಾತಾಡಿದರು. ತಾವು ಷರತ್ತುಗಳನ್ನು ಹಾಕದೆ ಅಭಿನಯಕ್ಕೆ ಒಪ್ಪುತ್ತಿರುವುದು ಸ್ವಭಾವತಃ ನಡೆದುಕೊಂಡು ಬಂದಿತ್ತು ಎಂದಿರುವ ರಶ್ಮಿಕಾ, ಅದೇ ತಮಗೆ ಹೊರೆಯಾಗುತ್ತಿದೆ ಎನ್ನುವ ಅಭಿಪ್ರಾಯವನ್ನೂ ಸಂದರ್ಶನವೊಂದರಲ್ಲಿ ಹೊರಹಾಕಿದ್ದಾರೆ.

ದೀಪಿಕಾ ಆರೆಂಟು ತಾಸಿನ ಕೆಲಸಕ್ಕೆ ತಾವು ಸೀಮಿತ ಎಂದು ಘೋಷಿಸಿರುವುದು ಅನೇಕ ನಿರ್ಮಾಪಕರಿಗೆ ಅಪಥ್ಯ ಆಗಿರಬಹುದು. ಆದರೆ ರಶ್ಮಿಕಾ ಆ ಆಯ್ಕೆಯನ್ನು ಗೌರವಿಸಿದ್ದಾರೆ. ಅಷ್ಟೇ ಅಲ್ಲ, ಚಿತ್ರೋದ್ಯಮದಲ್ಲೂ ಕೆಲಸದ ಅವಧಿಯ ವಿಷಯದಲ್ಲಿ ಶಿಸ್ತಿನ ಅಗತ್ಯವಿದೆ ಎಂದೂ ಪ್ರತಿಪಾದಿಸಿದ್ದಾರೆ.

‘ನಾನು ಏಕಕಾಲಕ್ಕೆ ಹಲವು ಚಿತ್ರಗಳಿಗೆ ಸಹಿ ಹಾಕುತ್ತಾ ಬಂದೆ. ನನಗೆ ಬೇರೆ ಆಯ್ಕೆ ಇರಲಿಲ್ಲ. ಕೆಲಸ ಮಾಡುವ ಹಸಿವು ಇರುವಾಗ ಉಳಿದ ಸಂಗತಿಗಳನ್ನು ನಿರ್ಲಕ್ಷಿಸುವುದು ಸಹಜ. ಈಗ ನನಗೂ ದಣಿವಾಗುತ್ತದೆ. ಒಂದಾದ ಮೇಲೆ ಒಂದು ಪ್ರಾಜೆಕ್ಟ್‌ನಲ್ಲಿ ಹಗಲಿರುಳು ಕೆಲಸ ಮಾಡುತ್ತಾ ಹೋದಂತೆ ನಮಗಾಗಿ ಒಂದಿಷ್ಟು ಸಮಯ ಮಾಡಿಕೊಳ್ಳುವುದೂ ಕಷ್ಟ ಅನಿಸತೊಡಗುತ್ತದೆ. ನನಗೂ ಹಾಗೆ ಅನಿಸುತ್ತಿದೆ. ಮುಂದೆ ನಾನೂ ಕೆಲಸದ ವಿಷಯದಲ್ಲಿ ಶಿಸ್ತನ್ನು ಅಳವಡಿಸಿಕೊಂಡರೆ ತಪ್ಪೇನೂ ಇಲ್ಲ’ ಎನ್ನುವುದು ರಶ್ಮಿಕಾ ಅನುಭವ ಆಡಿಸಿರುವ ಮಾತು. ಹಿಂದಿಯ ‘ಛಾವಾ’, ‘ಸಿಕಂದರ್’, ‘ಥಮ್ಮಾ’ ಸಿನಿಮಾಗಳಲ್ಲದೆ ತೆಲುಗಿನ ‘ಕುಬೇರ’ ಚಿತ್ರದಲ್ಲೂ ಈ ವರ್ಷ ರಶ್ಮಿಕಾ ಅಭಿನಯಿಸಿದರು. ಈ ಸಂಖ್ಯಾ ಸಮೃದ್ಧಿಯೇ ಅವರ ದಣಿವಿಗೂ ಕನ್ನಡಿ ಹಿಡಿಯುತ್ತದೆ. ■